**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ** :- ಶ್ರೀ ಎ.ವೆಂಕಟೇಶ್, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಯಾಂತ್ರಿಕ ಉಪ-ವಿಭಾಗ, ಗ್ರಾಮೀಣಾಭಿವೃದ್ಧಿ ಇಂಜಿನಿಯರಿಂಗ್ ಇಲಾಖೆ, ಮಂಗಳೂರು (ಪ್ರಸಕ್ತ ನಿವೃತ್ತ) ಇವರ ಅಮಾನತ್ತಿನ ಅವಧಿಯನ್ನು ಕರ್ತವ್ಯದ ಅವಧಿಯೆಂದು ಮಂಜೂರು ಮಾಡುವ ಬಗ್ಗೆ – ಆದೇಶ

**ಓದಲಾಗಿದೆ** :- 1. ಶ್ರೀ ಎ.ವೆಂಕಟೇಶ, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಯಾಂತ್ರಿಕ ಉಪ-ವಿಭಾಗ, ಮಂಗಳೂರು ಇವರ ಮನವಿ ದಿನಾಂಕ : 05.06.2017

2. ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 36 ಇಎನ್‌ಕ್ಯೂ 2004, ದಿನಾಂಕ : 31.12.2004

3. ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 36 ಇಎನ್‌ಕ್ಯೂ 2004, ದಿನಾಂಕ : 29.03.2005

*****

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿನ ದಿನಾಂಕ : 05.06.2017ರ ಶ್ರೀ ಎ.ವೆಂಕಟೇಶ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರು ಸಲ್ಲಿಸಿರುವ ಮನವಿಯಲ್ಲಿ ಯಾಂತ್ರಿಕ ಉಪ-ವಿಭಾಗ, ಮಂಗಳೂರು ಇಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, ಮಂಗಳೂರು ವ್ಯಾಪ್ತಿಯ ಕಾಮಗಾರಿಯ ದೂರಿಗೆ ಸಂಬಂಧಿಸಿದಂತೆ ಸದರಿಯವರನ್ನು ದಿನಾಂಕ : 31.12.2004ರ ಆದೇಶದಲ್ಲಿ ಅಮಾನತ್ತುಗೊಳಿಸಿದ್ದು, ತನಿಖೆಯಲ್ಲಿ ಆರೋಪವು ಸಾಬೀತಾಗದ ಕಾರಣ ದಿನಾಂಕ : 29.03.2005ರ ಆದೇಶದಲ್ಲಿ ಅವರ ಅಮಾನತ್ತನ್ನು ತೆರವುಗೊಳಿಸಿರುವುದರಿಂದ, ಸದರಿ ಅಮಾನತ್ತಿನ ಅವಧಿಯನ್ನು ಸಕ್ರಮಗೊಳಿಸುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿನ ದಿನಾಂಕ : 31.12.2004ರ ಸರ್ಕಾರದ ಆದೇಶದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, ಮಂಗಳೂರು ಇವರ ದಿನಾಂಕ : 04.08.2004ರ ವರದಿಯನುಸಾರ ಶ್ರೀ ಎ.ವೆಂಕಟೇಶ ಇವರು ಯಾಂತ್ರಿಕ ಉಪ-ವಿಭಾಗ, ಮಂಗಳೂರು ಇಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ, ಬಂಟ್ವಾಳ ಮತ್ತು ಉಲ್ಲಾಳ ಕ್ಷೇತ್ರದ ಬೋಳಿಯಾರ್ ಗ್ರಾಮದ ದೇವರಗುಂಡಿ ಎಂಬಲ್ಲಿ 2002-03ರಲ್ಲಿ ಪ್ರಕೃತಿ ವಿಕೋಪ ನಿಧಿಯಿಂದ ನಿರ್ಮಿಸಿರುವ ತಡೆಗೋಡೆ ಬಿದ್ದಿರುವ ಸಂಬಂಧ ಕಳಪೆ ಕಾಮಗಾರಿಗೆ ಸದರಿಯವರು ಕಾರಣರೆಂದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಸದರಿಯವರನ್ನು ಸೇವೆಯಿಂದ ಅಮಾನತ್ತುಪಡಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರಲ್ಲಿನ ದಿನಾಂಕ : 29.03.2005ರ ಸರ್ಕಾರದ ಆದೇಶದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, ಮಂಗಳೂರು ಇವರ ದಿನಾಂಕ : 23.02.2005ರ ವರದಿಯನುಸಾರ ಬಂಟ್ವಾಳ ಮತ್ತು ಉಲ್ಲಾಳ ಕ್ಷೇತ್ರದ ಬೋಳಿಯಾರ್ ಗ್ರಾಮದ ದೇವರಗುಂಡಿ ಎಂಬಲ್ಲಿ 2002-03ನೇ ಸಾಲಿನಲ್ಲಿ ಪ್ರಕೃತಿ ವಿಕೋಪ ನಿಧಿಯಿಂದ ತಡೆಗೋಡೆ ನಿರ್ಮಾಣ ಕಾಮಗಾರಿಯನ್ನು ದಿ: 07.04.2002ರಂದು ಪ್ರಾರಂಭಿಸಿ, ದಿ: 06.05.2002ಕ್ಕೆ ಮುಕ್ತಾಯ ಮಾಡಲಾಗಿರುತ್ತದೆ. ಈ ಕಾಮಗಾರಿಯನ್ನು ಶ್ರೀ ನರೇಂದ್ರಬಾಬು,

-2

ಸಹಾಯಕ ಇಂಜಿನಿಯರ್ ಇವರು ನಿರ್ವಹಿಸಿದ್ದು, ಶ್ರೀ ಹನುಮಂತಯ್ಯ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಅಳತೆಗಳನ್ನು ಪರಿಶೀಲನೆ ಮಾಡಿರುತ್ತಾರೆ. ಅಲ್ಲದೇ, ಈ ಕಾಮಗಾರಿಗೆ ಸಂಬಂಧಿಸಿದಂತೆ ಸ್ವೀಕೃತವಾಗಿರುವ ದೂರರ್ಜಿ ಸುಳ್ಳು ಅರ್ಜಿಯಾಗಿದ್ದು, ಅರ್ಜಿಯಲ್ಲಿ ಯಾವುದೇ ಸತ್ಯಾಂಶವಿರುವುದಿಲ್ಲ ಹಾಗೂ ಅರ್ಜಿಯನ್ನು ದುರುದ್ದೇಶದಿಂದ ಬರೆಯಲಾಗಿದ್ದು, ತಡೆಗೋಡೆಯ ಮಧ್ಯದಲ್ಲಿ ಮೇಲ್ಭಾಗವು ಮಳೆಗಾಲದಲ್ಲಿ ಯಾವುದೋ ಬಾಹ್ಯ ಒತ್ತಡಕ್ಕೆ ಒಳಗಾಗಿ ಬಿದ್ದಿರುವ ಸಾಧ್ಯತೆ ಇದೆ ಹಾಗೂ ಬಿದ್ದಿರುವ ಭಾಗವನ್ನು ಸರ್ಕಾರಕ್ಕೆ ಯಾವುದೇ ನಷ್ಟವಾಗದಂತೆ ಸಂಬಂಧಿಸಿದವರು ಸರಿಪಡಿಸಿರುತ್ತಾರೆಂದು ವರದಿಸಿರುವ ಹಿನ್ನಲೆಯಲ್ಲಿ, ಶ್ರೀ ಎ.ವೆಂಕಟೇಶ, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ-ವಿಭಾಗ, ಮಂಗಳೂರು ಇವರು ಬಂಟ್ವಾಳ ಮತ್ತು ಉಲ್ಲಾಳ ಕ್ಷೇತ್ರದ ಬೋಳಿಯಾರ್ ಗ್ರಾಮದ ದೇವರಗುಂಡಿ ಎಂಬಲ್ಲಿ 2002-03ನೇ ಸಾಲಿನಲ್ಲಿ ಪ್ರಕೃತಿ ವಿಕೋಪ ನಿಧಿಯಿಂದ ನಿರ್ಮಿಸಿರುವ ತಡೆಗೋಡೆ ಕಳಪೆ ಕಾಮಗಾರಿಗೆ ಕಾರಣರಲ್ಲವೆನ್ನುವುದು ಹಾಗೂ ಸದರಿ ಕಾಮಗಾರಿಯಲ್ಲಿ ಸರ್ಕಾರಕ್ಕೆ ಯಾವುದೇ ಆರ್ಥಿಕ ನಷ್ಟವಾಗಿಲ್ಲದಿರುವುದು ಸ್ಪಷ್ಟವಾಗಿದ್ದು, ಅಂದಿನ ಮಾನ್ಯ ಗ್ರಾಮೀಣ ನೀರು ಸರಬರಾಜು ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ರಾಜ್ಯ ಸಚಿವರ ಆದೇಶ ಪಡೆದು ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಿದೆ.

ಸರ್ಕಾರವು ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದೆ. ಈ ಪ್ರಕರಣದಲ್ಲಿ ಬಂಟ್ವಾಳ ಮತ್ತು ಉಲ್ಲಾಳ ಕ್ಷೇತ್ರದ ಬೋಳಿಯಾರ್ ಗ್ರಾಮದ ದೇವರಗುಂಡಿ ಎಂಬಲ್ಲಿ 2002-03ರಲ್ಲಿ ಪ್ರಕೃತಿ ವಿಕೋಪ ನಿಧಿಯಿಂದ ನಿರ್ಮಿಸಿರುವ ತಡೆಗೋಡೆ ಬಿದ್ದಿರುವುದಕ್ಕೆ ಶ್ರೀ ಎ.ವೆಂಕಟೇಶ, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಯಾಂತ್ರಿಕ ಉಪ-ವಿಭಾಗ, ಮಂಗಳೂರು ಇವರು ಕಾರಣರಲ್ಲವೆಂದು ಸಾಬಿತಾಗಿ, ಅವರ ಮೇಲಿನ ಅಮಾನತ್ತನ್ನು ತೆರವುಗೊಳಿಸಿ, ಪ್ರಕರಣವನ್ನು ಮುಕ್ತಾಯಗೊಳಿಸಿದ್ದರಿಂದ, ಸದರಿಯವರು ಅಮಾನತ್ತಿನಲ್ಲಿ ಕಳೆದ ಅವಧಿಯನ್ನು ಕರ್ತವ್ಯದ ಅವಧಿಯೆಂದು ಮಂಜೂರು ಮಾಡಲು ಸರ್ಕಾರವು ತೀರ್ಮಾನಿಸಿದೆ. ಆದುದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 126 ಸೇಶಿಕಾ 2017, ಬೆಂಗಳೂರು, ದಿನಾಂಕ : 01.09.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಸರ್ಕಾರವು ಶ್ರೀ ಎ.ವೆಂಕಟೇಶ, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಯಾಂತ್ರಿಕ ಉಪ-ವಿಭಾಗ, ಮಂಗಳೂರು (ಪ್ರಸಕ್ತ ನಿವೃತ್ತ)ಇವರು ಅಮಾನತ್ತಿನಲ್ಲಿ ಕಳೆದ ದಿನಾಂಕ: 31.12.2004 ರಿಂದ 29.03.2005ರ ವರೆಗಿನ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಗಳು ನಿಯಮ 100 (3)ರ ಪ್ರಕಾರ ಕರ್ತವ್ಯದ ಅವಧಿಯೆಂದು ಪರಿಗಣಿಸಿ ಮಂಜೂರು ಮಾಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್.ರಂಗನಗೌಡ) 01/09/2017
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ :-

2/01/09

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು (ಲೆಕ್ಕಪತ್ರ 1&2) / (ಆಡಿಟ್)
2. ಸರ್ಕಾರದ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

- 3

3. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, ಮಂಗಳೂರು
5. ಸಂಬಂಧಿಸಿದ ನಿವೃತ್ತ ಅಧಿಕಾರಿಗೆ.

ಪ್ರತಿ ಮಾಹಿತಿಗಾಗಿ :

1. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ / ಜಂಟಿ ಕಾರ್ಯದರ್ಶಿ (ಆಡಳಿತ) / ಉಪ ಕಾರ್ಯದರ್ಶಿ (ಆಡಳಿತ) / ಆಂತರಿಕ ಆರ್ಥಿಕ ಸಲಹೆಗಾರರು ಇವರುಗಳ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರಿಗೆ
2. ಮೇಲ್ವಿಚಾರಕರು, ಗಣಕಯಂತ್ರ ವಿಭಾಗ, ಗ್ರಾ.ಅ.ಪಂ.ರಾಜ್ ಇಲಾಖೆ ಇವರಿಗೆ ವೆಬ್‌ಸೈಟಿನಲ್ಲಿ ಪ್ರಕಟಿಸುವ ಸಲುವಾಗಿ
3. ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು

*****